ಈ) ರಸ್ತೆ ಡಾಂಬರೀಕರಣಕ್ಕೆ ಇಲ್ಲಿಯವರೆಗೆ ಪಡೆದಂತಹ ಸಾಲವೆಷ್ಟು; ವಿತರಣೆ ಮಾಡಿದ ಮತ್ತು ಬಾಕಿ ಇರುವ ಹಣವೆಷ್ಟು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) 2002-03ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಸುಮಾರು 460 ಕಿ.ಮೀ ರಾಷ್ಟ್ರೀಯ ಹೆದ್ದಾರಿಗಳನ್ನು 3962 ಕಿ.ಮೀ ರಾಜ್ಯ ಹೆದ್ದಾರಿಗಳನ್ನು ಮತ್ತು 2580 ಕಿ.ಮೀ ಜಿಲ್ಲಾ ಮುಖ್ಯ ರಸ್ತೆಗಳನ್ನು ಮರು ಡಾಂಬರೀಕರಣ ಮಾಡಲು ಗುರಿ ಹೊಂದಿದೆ.

ಆ) ಬಿಡುಗಡೆ ಮಾಡಿದ ಹಣ ರೂ. 459.22 ಕೋಟಿಗಳು ಬಿಡುಗಡೆಯಾಗಬೇಕಾಗಿರುವ ಹಣ ರೂ. 65.29 ಕೋಟಿಗಳು

ಇ) ನಿಗಧಿಗೊಳಿಸಲಾಗಿದೆ

ಈ) ಇಲ್ಲಿಯವರೆಗೆ ಹುಡ್ಕೋ ಸಂಸ್ಥೆಯವರಿಂದ 150 ಕೋಟಿ ರೂ. ಗಳ ಸಾಲ ಪಡೆದಿದೆ. 145.57 ಕೋಟಿ ರೂ. ಗಳನ್ನು ವಿತರಣೆ ಮಾಡಿರುತ್ತದೆ.

## ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ರಸ್ತೆ ಡಾಂಬರೀಕರಣ

303 (2668) ಶ್ರೀ ಬಸವರಾಜು ಹೆಚ್.ಸಿ. (ಪಿರಿಯಾಪಟ್ಟಣ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪಿರಿಯಾಪಟ್ಟಣ ತಾಲ್ಲೂಕಿನಲ್ಲಿರುವ ಜಿ.ಸಿ.ಎ.ಡಿ. ರಸ್ತೆ ಡಾಂಬರೀಕರಣ (ನಬಾರ್ಡ್) ಯಾವಾಗ ಪ್ರಾರಂಭವಾಯಿತು ಹಾಗೂ ಎಷ್ಟು ಹಣ ಮಂಜೂರಾತಿ ಆಗಿದೆ; ಇದುವರೆವಿಗೂ ಎಷ್ಟು ಕಾಮಗಾರಿ ಮುಗಿದಿದೆ ಹಾಗೂ ಹಣ ಖರ್ಚಾಗಿದೆ; ಈ ರಸ್ತೆ ಕಾಮಗಾರಿ ಯಾವಾಗ ಮುಗಿಸುತ್ತೀರಿ; ಈ ರಸ್ತೆ ಕಾಮಗಾರಿ ಗುಣಮಟ್ಟ ಸಮರ್ಪಕವಾಗಿದೆಯೆ ತಿಳಿಸಿ;

ಆ) ಪಿರಿಯಾಪಟ್ಟಣ ತಾಲ್ಲೂಕಿನ ರಾವಂದೂರು-ಬೆಟ್ಟದತುಂಗ-ಬೆಟ್ಟದಪುರ ರಸ್ತೆ ಡಾಂಬರೀಕರಣ ಮಾಡಲು ನಬಾರ್ಡ್ ಸಂಸ್ಥೆ ವತಿಯಿಂದ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳಲು ಪ್ರಸ್ತಾವನೆ ಬಂದಿದೆಯೇ; ಯಾವ ಹಂತದಲ್ಲಿದೆ ಮತ್ತು ಕಾಮಗಾರಿಗೆ ತಗಲುವ ವೆಚ್ಚ ಎಷ್ಟು; ಯಾವಾಗ ಪ್ರಾರಂಭಿಸುತ್ತೀರಿ ತಿಳಿಸಿ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಪಿರಿಯಾಪಟ್ಟಣ ತಾಲ್ಲೂಕಿನ ಗೋರಹಳ್ಳಿ ಚಪ್ಪರದಹಳ್ಳಿ ಅಂಬ್ಲಾರೆ ದೊಡ್ಡಕಮರಹಳ್ಳಿ ಜಿಲ್ಲಾ ಮುಖ್ಯ ರಸ್ತೆಯ ಅಭಿವೃದ್ಧಿ ಕಾಮಗಾರಿಯನ್ನು ದಿನಾಂಕ 8/5/98ರಲ್ಲಿ ಪ್ರಾರಂಭಿಸಲಾಯಿತು. ಆರ್‌ಐಡಿಎಫ್-3ರಡಿ ಈ ರಸ್ತೆಯ ಅಭಿವೃದ್ಧಿಗೆ ರೂ. 39.60 ಲಕ್ಷ ಮಂಜೂರಾಗಿರುತ್ತದೆ.

ಈ ರಸ್ತೆಯ ಜಲ್ಲಿ ಫಟ್ಟಣೆ ಪೂರ್ಣಗೊಂಡಿದ್ದು, ಡಾಂಬರೀಕರಣ ಕೆಲಸ ಬಾಕಿ ಇದೆ. ಈ ಕಾಮಗಾರಿಯನ್ನು ಏಪ್ರಿಲ್ 2003ರ ಒಳಗೆ ಪೂರ್ಣಗೊಳಿಸಲಾಗುತ್ತದೆ.

ಸದರಿ ಕಾಮಗಾರಿಯ ಗುಣಮಟ್ಟವನ್ನು ಕಾಯ್ದುಕೊಳ್ಳಲಾಗಿದೆ.

ಆ) ಈ ರಸ್ತೆಯನ್ನು ನಬಾರ್ಡ್ ಯೋಜನೆಯಲ್ಲಿ ರೂ. 80.00 ಲಕ್ಷ ಮೊತ್ತಕ್ಕೆ ಕೈಗೊಳ್ಳಲು ಪ್ರಸ್ತಾವನೆ ಬಂದಿದೆ. ನಬಾರ್ಡ್ ಸಾಲದಡಿ ಹೊಸ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ ಇನ್ನೂ ಅಂತಿಮ ತೀರ್ಮಾನವಾಗಿರುವುದಿಲ್ಲ.